Date : 28-9-2015

# ಮಹಾರಾಷ್ಟ್ರದಲ್ಲಿ 2015–2016ನೇ ಸಾಲಿನ ಸಕ್ಕರೆ ಉತ್ಪಾದಿಸಲು ಅಕ್ಟೋಬರ್ 15ರಿಂದ ಕಬ್ಬು ಅರೆಯುವ ಕಾರ್ಯಾರಂಭ

ಸಕ್ಕರೆ ಉತ್ಪಾದಿಸುವ 2015–16ನೇ ಸೀಜನ್‌ನ ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸಲು 15 ಅಕ್ಟೋಬರ್‌ನಿಂದ ಕಾರ್ಯಾರಂಭ ಮಾಡಬಹುದೆಂದು ಮಹಾರಾಷ್ಟ್ರದ ಮಂತ್ರಿಗಳ ಸಭೆಯಲ್ಲಿ ನಿರ್ಧರಿಸಲಾಗಿದೆಯೆನ್ನಲಾಗಿದೆ. ಸಕ್ಕರೆ ತಯಾರಿಸಲು ಕಬ್ಬು ನುರಿಸುವ ಕಾರ್ಯಾರಂಭದ ಬಗ್ಗೆ ಅವಲೋಕಿಸಲು ಮಹಾರಾಷ್ಟ್ರ ಮುಖ್ಯಮಂತ್ರಿಗಳ ಕಾರ್ಯಾಲಯದಲ್ಲಿ ಸಭೆನಡೆಸಿ ಅಕ್ಟೋಬರ್ 15ರಿಂದ ಸೀಜನ್‌ನ ಕಾರ್ಯಾರಂಭ ಪ್ರಾರಂಭ ಮಾಡಬಹುದೆಂದೂ ಹಿಂದಿನ ಸೀಜನ್‌ನಲ್ಲಿ ಪಾವತಿ ಮಾಡದ **FRP** ಯನ್ನು ಒಂದು ತಿಂಗಳೊಳಗೆ ಕಾರ್ಖಾನೆಗಳು ಪಾವತಿ ಮಾಡಬೇಕೆಂದೂ ತಿಳಿಸಲಾಯಿತೆನ್ನಲಾಗಿದೆ.

ಸಭೆಯಲ್ಲಿ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಅವರು ಕೇಂದ್ರ ಸರಕಾರ **FRP** ಯನ್ನು ಮೆಟ್ರಿಕ್ ಟನ್‌ಗೆ ರೂ 2300ಕ್ಕೆ ನಿಗದಿಪಡಿಸಿರುವುದರಿಂದ 2015–16 ರ ಸೀಜನ್‌ನಲ್ಲಿ ಜುಲೈ ತನಕ ಕಬ್ಬಿಗೆ ರೈತರು ಟನ್‌ಗೆ ರೂ 2736 ಪಡೆಯಲಿದ್ದಾರೆಂದು ಅದರಲ್ಲಿ ಅವರು ಕಟಾವು ಮತ್ತು ಸಾಗಾಣಿಕ ವೆಚ್ಚಾ ರೂ. 550/– ನ್ನು ಭರಿಸಬೇಕಾಗುವುದೆಂದರು.

ಕಳೆದ ಸೀಜನ್‌ನಲ್ಲಿ ಮಹಾರಾಷ್ಟ್ರದಲ್ಲಿ 930 ಲಕ್ಷ ಟನ್ ಕಬ್ಬು ಅರೆದು, 105 ಲಕ್ಷ ಟನ್ ಕಬ್ಬು ಉತ್ಪಾದಿಸಲಾಗಿದ್ದು, 14 ಲಕ್ಷ ಟನ್‌ಗಳ ಕ್ಯಾರಿಓವರ್ ದಾಸ್ತಾನು ಹೊಂದಿತ್ತು. ಈ ಸೀಜನ್‌ನಲ್ಲಿ 85 ಲಕ್ಷ ಟನ್ ಕಬ್ಬು ಮಾರಾಟಮಾಡಿ 15 ಲಕ್ಷ ಟನ್ ಉಳಿಕೆಯಾಗಿದೆ. ಈ ಸೀಜನ್ ಆರಂಭಕ್ಕೆ 34 ಲಕ್ಷ ಟನ್ ಸಕ್ಕರೆ ಇರಲಿದ್ದು ಬರ ಪರಿಸ್ಥಿತಿಯಿಂದ ಈ ವರ್ಷದ ಉತ್ಪಾದನೆ ಕುಂಠಿತಗೊಂಡು ಸುಮಾರು 760 ಲಕ್ಷ ಟನ್ ಕಬ್ಬು ನುರಿಸಲು ಸಿಗಬಹುದಾಗಿದ್ದು ಇದರಿಂದ 86ಲಕ್ಷ ಟನ್ ಸಕ್ಕರೆ ಈ ಸೀಜನ್‌ನಲ್ಲಿ ಉತ್ಪಾದನೆಯಾಗಬಹುದೆನ್ನಲಾಗಿದೆ.

quickmarketreports.com